ಒಂದು ಮೂಲೆಯಲ್ಲಿ ಗುಡಿ ಹೊದ್ದುಕೊಂಡು ಮಲಗಿ ಬಿಡುತ್ತಿದ್ದವು. ಮತ್ತೆ ಅವಕ್ಕೆ ಜೀವ ಬರುತ್ತಿದ್ದದ್ದು ಬರುವ ಬೇಸಗೆಯಲ್ಲಿಯೇ. ಆದರೆ ಏನು ಸುಖ? ಶಾಲೆಯವರೆಗೆ ಪಾದ ಬೆಳೆಸಿದ ನಂತರವೇ ರಜೆ ಘೋಷಿಸುತ್ತಿದ್ದರು. ಮತ್ತೆ ಒದ್ದೆ ಬಟ್ಟೆಯಲ್ಲಿ ನಡುಗುತ್ತಾ ಮನೆ ಸೇರಿದರೂ ಪ್ರಯೋಜನವೇನಿಲ್ಲ. ಮನೆಗೆ ಬಂದು ಚಳಿ ಕಾಯಿಸುತ್ತಾ ತೆಪ್ಪಗೆ ಕುಳಿತುಕೊಳ್ಳುವಂತಿಲ್ಲ. ಸಾಕಷ್ಟು ಕೆಲಸಗಳು ನಮ್ಮನ್ನೇ ದಾರಿ ಕಾಯುತ್ತಾ ಕುಳಿತ್ತಿರುತ್ತಿದ್ದವು. ಲೆಕ್ಕದ ತರಗತಿ ತಪ್ಪಿ, ಪೆಟ್ಟೊಂದು ತಪ್ಪಿತೆಂಬುವುದೊಂದೇ ಖುಷಿಯ ವಿಚಾರ ಬಿಟ್ಟರೆ, ಆ ಮಳೆಗೆ ಗದ್ದೆಯ ಏರಿಯಲ್ಲಿ ಮೇಯಲು ಬಿಟ್ಟ ದನಗಳನ್ನು ಕರೆದುಕೊಂಡು ಬಂದು ಹಟ್ಟಿಯಲ್ಲಿ ಕೂಡಬೇಕು, ಭತ್ತದ ಪೈರಿನ ನಡುವೆ ಹುಟ್ಟಿಕೊಂಡ ಕಳೆಯನ್ನೆಲ್ಲಾ ತೆಗೆಯಬೇಕು, ಇದೆಲ್ಲಾ ಮಕ್ಕಳಿಗಾಗಿಯೇ ಮೀಸಲಾದ ಕೆಲಸಗಳು. ಅದರ ನಡುವೆಯೂ ಸಂಜೆ ಹೊತ್ತಿನಲ್ಲಿ ಸಿಕ್ಕ ಅಣಬೆಯನ್ನು ಒಲೆಯಲ್ಲಿ ಸುಟ್ಟು, ಅದಕ್ಕೆ ಉಪ್ಪು ಖಾರ ಹಚ್ಚಿ ಸವಿಯುವ ಸುಖವೇ ಬೇರೆ. ಆದರ ಜೊತೆಗೆ ಹಲಸಿನ ಬೀಜ, ಹುಣಸೆ ಬೀಜ, ಗೇರು ಬೀಜ ಇವನ್ನೆಲ್ಲಾ ನಿಗಿ ನಿಗಿ ಕೆಂಡಕ್ಕೆ ಹಾಕಿ ಸುಟ್ಟು ತಿನ್ನದೇ ಇದ್ದರೆ ಮಳೆಗಾಲ ಅಪೂರ್ಣವೇ.

ಕಾಲ ಬದಲಾಗುತ್ತಲೇ ಇದೆ. ಕಾಲದ ಜೊತೆಗೆ ಸುರಿಯುವ ಮಳೆಯೂ ಮತ್ತು ಅದನ್ನು ಅನುಭವಿಸುವ ಮನಸ್ಸು ಕೂಡ. ಕಳೆದೆರಡು ವರ್ಷದ ಮಳೆ ತಂದಿಟ್ಟ ನೋವು, ಕಣ್ಣೀರು ಇನ್ನು ನಂಬಲಿಕ್ಕೆ ಸಾಧ್ಯವಿಲ್ಲ ಅಂತನ್ನಿಸುತ್ತದೆ. ಇಂತಹ ನೋವು ಇಲ್ಲಿತನಕ ಅನುಭವಿಸದಿದ್ದ ನಮ್ಮೂರ ಜನತೆಗೆ ಮಳೆ ಇಷ್ಟೊಂದು ಅಘಾತ ಉಂಟು ಮಾಡಬಹುದೆಂದು ಯೋಚಿಸಲೂ ಆಗುತ್ತಿಲ್ಲ. ಮಳೆ ಬರುವುದೇ ನಮ್ಮನ್ನೆಲ್ಲ ಪೊರೆಯಲು ಎಂಬುದು ನಾವು ಮಳೆ ಬಗ್ಗೆ ತೋರಿಸುವ ಪ್ರೀತಿಗೆ ಸಾಕ್ಷಿ. ಕಳೆದ ಮಳೆಗಾಲ ಇಲ್ಲಿ ಅದೆಷ್ಟು ಧಾರಾಕಾರವಾಗಿ ಸುರಿಯಿತೆಂದರೆ ನೀರೇ ನೀರು. ಮನೆಯ ಸುತ್ತಮುತ್ತ ಹಾಗೇ ಸುಖಾಸುಮ್ಮನೆ ಹರಿದುಹೋಗುತ್ತಿದೆ. ಅನತಿ ದೂರದಲ್ಲಿರುವ ನದಿ ಕೆಂಬಣ್ಣದ ಸೀರೆಯುಟ್ಟು ಹುಚ್ಚುಗಟ್ಟಿ ಕೆನೆಯುತ್ತಿದೆ. ನೋಡ ನೋಡುತ್ತಿದ್ದಂತೆ ಇಡೀ ಊರಿಗೆ ಊರೇ ಕೊಚ್ಚಿ ಹೋಗಿ ಸುಂದರ ಊರಿನ ಚಿತ್ರಣವೇ ಬದಲಾಗಿ , ಮಳೆ ಶೋಕದ ಸಾಗರವನ್ನೇ ತುಂಬಿಟ್ಟು ಮಳೆಯೆಂದರೆ ಪ್ರೇತಕಳೆ ಆವರಿಸುತ್ತಿತ್ತು. ಅಂತಹ ಭಯಾನಕ ಮಳೆ ಕಳೆದು ಸಣ್ಣಗೆ ಬಿಸಿಲು ಹಣಕಿ , ಅದು ಮತ್ತಷ್ಟು ಪ್ರಖರವಾಗಿ ನೀರೊಳಗೆ ನಿಂತಿದ್ದ ಊರಿನ ನದಿ ಕೆರೆ ಬಾವಿಗಳೆಲ್ಲಾ ತೊಟ್ಟು ನೀರಿಲ್ಲದೆ ಮತ್ತೆ ಮುಗಿಲಿಗೆ ಮುಖ ಮಾಡಿ ಹಪಹಪಿಸುತ್ತಾ ನಿಂತಿತ್ತು.

ಹೌದು! ಮಳೆಯೆಂದರೆ ಹಾಗೆಯೇ; ಹಳೆಯ ದುಃಸ್ವಪ್ನಗಳನ್ನೆಲ್ಲಾ ಮರೆಯಿಸಿ ಮತ್ತೆ ಕಣ್ಣಲ್ಲಿ ಕನಸು ತುಂಬಿಸುತ್ತದೆ. ಜಗತ್ತಿನ ಸ್ವರ್ಗ ಸುಖವೆಲ್ಲ ಪಾದದಡಿಯಲ್ಲಿ ಮಂಡಿಯೂರಿ ಕುಳಿತರೂ ನೀರಿಲ್ಲದೆ ಬದುಕಲು ಸಾಧ್ಯವೇ? ಅಲ್ಲಿ ಜಗತ್ತನ್ನೆಲ್ಲಾ ಸುಡುವ ಕೋಪದಲ್ಲಿ ಸೂರ್ಯ ನಿಂತಿದ್ದರೆ, ಇಲ್ಲಿ ಮನಸು ಮಳೆ ರಾಯನಿಗೆ ಮೊರೆಯಿಡುತ್ತಿದೆ.

ಮಳೆಯೆಂದರೆ ಪ್ರೀತಿಯ ಮತ್ತೊಂದು ಮುಖ. ಆಳದಿಂದ ಪ್ರಾಮಾಣಿಕವಾಗಿ ತುಸು ನೆನೆದುಕೊಂಡರೂ ಸಾಕು, ಒಮ್ಮೆ ಹೆದರಿಸಿದಂತೆ ಗುಡುಗುಡೆಂದು ಗುಡುಗಿ ಫಳಾರೆಂದು ಮಿಂಚಿ ಹನಿ ಹನಿಯಾಗಿ ತೊಟ್ಟಿಕ್ಕಿ, ನೋಡ ನೋಡುತ್ತಿದ್ದಂತೆಯೇ ಸೂರಿನಡಿಯಲ್ಲಿ ಧಾರೆ ಧಾರೆ ಸುರಿಸಿ ಮೈ ಮನಸುಗಳನ್ನೆಲ್ಲಾ ನಿರಾಳಗೊಳಿಸಿಬಿಡುತ್ತದೆ. ಒಲವು, ಪ್ರೀತಿ, ಮಮತೆ, ಕರುಣೆ – ಹೀಗೆ ಎಲ್ಲಾ ಮೃದುತ್ವಗಳನ್ನು ತನ್ನೊಳಗೆ ಆವಾಹಿಸಿಕೊಂಡು ನಮ್ಮ ಮುಂದೆ ನಿರ್ಮಲವಾಗಿ ಸುರಿಸತೊಡಗುವುದು. ಅದಕ್ಕೇ ಒಣಗಿದೆದೆಯ ಮೇಲೆಲ್ಲಾ ಹೆಸರರಿಯದ ಬೀಜ ಸಿಡಿದು ಹಸಿರು ಪಲ್ಲವಿಸಿ ತೊನೆಯುವುದು. ಮತ್ತೆ ಬದುಕು ತುಂಬಿಕೊಳ್ಳತೊಡಗುವುದು. ಹಸಿರು, ಉಸಿರು ಎಲ್ಲವೂ ಮಳೆಯಾಗಿ ಸುರಿಯುವುದು. ಈಗ ನೀರೆಂದರೆ ನೀರು. ಕೊಡಪಾನ ಹಿಡಿದು ಯಾರದೋ ಜಾಗಕ್ಕೆ ಹೋಗಿ ಸರತಿ ಸಾಲಿನಲ್ಲಿ ಕಾಯಬೇಕಿಲ್ಲ. ಮಳೆ ಸಮಾನತೆಯ ಹರಿಕಾರ. ಎಲ್ಲರ ಮನೆಯ ಕೆರೆ ಬಾವಿ ತುಂಬಾ ಬೇಕು ಬೇಕಾದಷ್ಟು ನೀರು. ನೀರಿಲ್ಲದ ದಿನಗಳು ಹೇಗಿದ್ದವು ಅನ್ನುವುದು ನೆನಪಿಗೆ ಬಾರದಷ್ಟು ನೀರು. ಮನೆಯ ಮೆಟ್ಟಿಲಿಳಿದು ಸರಿ ನಾಲ್ಕೇ ನಾಲ್ಕು ಹೆಜ್ಜೆ ನಡೆದರೆ ಸಾಕು ಅಂಗಳದ ಬದಿಯ ಬಾವಿಯಲ್ಲಿ ಎರಡೇ ಎರಡು ಎಳೆತಕ್ಕೆ ಕೊಡಪಾನ ಕಟ್ಟೆ ಮೇಲೆ ಬಂದು ಕುಳಿತುಕೊಳ್ಳುತ್ತದೆ ತುಂಬಿದ ಕೊಡ.

ಆದರೆ ಬಾವಿ ಕಟ್ಟೆಗೆ ಜಾಗವಿಲ್ಲದ ಮನೆಗಳಲ್ಲಿ, ಮನೆಗಳೇ ತಲೆಮೇಲೆ ನೀರಿನ ಟಾಂಕಿಯನ್ನು ಹೊತ್ತು ಕರೆಂಟನ್ನೇ ನಂಬಿರುವಾಗ ಅದು ತರುವ ಫಜೀತಿಗಳು ಕಡಿಮೆಯೇನಲ್ಲ. ಮಳೆ–ಗಾಳಿಯ ರಭಸಕ್ಕೆ ಕರೆಂಟು ತಂತಿ ಕಡಿದುಹೋಗಿ, ನೀರಿನ ಟ್ಯಾಂಕಿ ಬರಿದಾಗಿ, ನೀರು ತುಂಬಲು ಕರೆಂಟು ಇಲ್ಲದೆ, ಪ್ರತೀ ಕೋಣೆಯಲ್ಲಿ ಟ್ಯಾಪು ತಿರುವಿದರೆ ಭರ್ರೋ ಸುರಿಯುವ ಪೈಪುಗಳು ಖಾಲಿಯಾಗಿ ಬುಸು ಬುಸು ಉಸುರು ಹೊರಡಿಸುವಾಗ, ನಮಗೆ ಕೈ ಕಾಲೇ ಬಿದ್ದು ಹೋದಂತೆನಿಸಿ ಒದ್ದಾಡಿದ್ದೇ ಒದ್ದಾಡಿದ್ದು. ಹೊರಗೆ ಧಾರಾಕಾರವಾಗಿ ನೀರು ತುಂಬಿ ಚೆಲ್ಲಿ ಹರಿದುಹೋಗುತ್ತಲೇ ಇದ್ದರೂ, ಮನೆಯೊಳಗೆ ತೊಟ್ಟು ನೀರಿಲ್ಲದೆ ಪರದಾಡುವ ಸ್ಥಿತಿಗೆ ಮಳೆಗೆ ಹುಸಿ ಕೋಪದಿಂದ ಸುಮ್ಮ ಸುಮ್ಮಗೆ ಹಳಿದದ್ದೇ ಹಳಿದದ್ದು.

ಆದರೆ ಮಳೆ ಬರೇ ಮಳೆಯಲ್ಲ. ಅದು ಜಿನುಜಿನುಗಿ ಸುರಿಯುವ ನೆನಪುಗಳ ಒರತೆ. ಬೇರಾವ ಕಾಲದಲ್ಲೂ ನೆನಪಿಗೆ ಬಾರದ ಸಂಗತಿಗಳೆಲ್ಲಾ ನಾ ಮುಂದು ನಾ ಮುಂದು ಅಂತ ಹಟಕ್ಕೆ ಬಿದ್ದವರಂತೆ ಎದೆಯೊಳಗೆ ಬೀಳುತ್ತವೆ. ಮನಸಿನೊಳಗೆ ಆವರಿಸಿಕೊಳ್ಳುತ್ತವೆ. ಒಂದು ಮತ್ತೊಂದಕ್ಕೆ ಕೊಂಡಿಯಾಗಿಸುತ್ತ ಹಿಂದಕ್ಕೆ ತಿರುಗಿಸುತ್ತವೆ. ಮಳೆ, ಪ್ರತೀ ಮಳೆಯೂ ಹೊಸತೇ. ಕಾಲ ಬದಲಾದಂತೆ ಹಳೆಯ ನೆನಪುಗಳು ಹೊಸ ಬಗೆಯಲ್ಲಿ ನವೀಕರಣಗೊಂಡು ತಾಜಾ ತಾಜಾವಾಗಿ ನಮ್ಮ ಮುಂದೆ ತೆರೆದಿಡುವುದಕ್ಕೆ ಮಳೆಗಷ್ಟೇ ಸಾಧ್ಯ.

ನೆನಪಿಟ್ಟುಕೊಳ್ಳಲೇ ಬೇಕಾದ ಸಂಗತಿಗಳನ್ನೆಲ್ಲಾ ಮರೆತು ತಮಗೂ ಈ ಪ್ರಪಂಚಕ್ಕೂ ಯಾವುದೇ ಸಂಬಂಧವಿಲ್ಲ ಅಂತ ವರ್ತಿಸುವ, ಭ್ರಮೆಯಲ್ಲಿ ತೇಲುವ ಅದೆಷ್ಟೋ ಜಾಣ ಮರೆವಿನ ಮರೆಗುಳಿ ಮನಸುಗಳನ್ನೆಲ್ಲಾ ಎಳೆತಂದು ಮಳೆಯಲ್ಲಿ ನಿಲ್ಲಿಸಿ ತೋಯಿಸುವುದೇ ಒಳ್ಳೆಯದು ಅಂತ ಮಳೆಯ ನಡುವೆ ಮನಸಿನೊಳಗೆ ನುಗ್ಗಿ ಬರುವ ತುಂಟ ಯೋಚನೆಯೊಂದು ನಗು ತರಿಸುತ್ತದೆ.

ಪ್ರತಿಕ್ರಿಯಿಸಿ: **feedback@sudha.co.in**

